# ಮಂಗಳೂರು ವಿಭಾಗ ಸಾಂಘಿಕ್ ವಾರ್ತಾ

25 ಜನವರಿ 2013 | ಪುಷ್ಯ ಶುದ್ಧ ತ್ರಯೋದಶಿ | ನಂದನ ಸಂವತ್ಸರ | ಸಂಚಿಕೆ : 4


# ಅಂತಿಮ ಘಟ್ಟ ತಲುಪಿದ ಸಾಂಘಿಕ್ ತಯಾರಿ

ಸಾಂಘಿಕ್‌ಗೆ ಕೆಲವೇ ದಿನಗಳು ಬಾಕಿ ಉಳಿದಿದ್ದು ಕಾರ್ಯಕರ್ತರು ಬಿರುಸಿನಿಂದ ಓಡಾಡುತ್ತಿದ್ದಾರೆ. ಗಣವೇಷದ ಮಾರಾಟ ಭರದಿಂದ ಸಾಗುತ್ತಿದೆ. ಮೈದಾನವನ್ನು ಸಮತಟ್ಟುಗೊಳಿಸುವ ಕೆಲಸ ಪೂರ್ಣಗೊಂಡಿದೆ. ಸಾಂಘಿಕ್‌ನ ಸಿದ್ಧತೆಗಾಗಿ ಹಲವಾರು ವ್ಯವಸ್ಥಾ ವಿಭಾಗಗಳಲ್ಲಿ ನೂರಾರು ಕಾರ್ಯಕರ್ತರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. 23 ರಂದು ಸಾಂಘಿಕ್ ಸ್ಥಾನದಲ್ಲಿ ಭೂಮಿ ಪೂಜೆ ಕಾರ್ಯಕ್ರಮ ವಿಧಿವತ್ತಾಗಿ ನಡೆದು ವೇದಿಕೆ ನಿರ್ಮಾಣದ ಕಾರ್ಯ ಆರಂಭವಾಗಿದೆ.

ವಿಭಾಗದಲ್ಲಿ ಹಲವೆಡೆ ನಡೆದ ವಿವಿಧ ಕಾರ್ಯಕ್ರಮಗಳು ಮತ್ತು ಕಾರ್ಯಕರ್ತರ ಪ್ರಯತ್ನಗಳ ವರದಿಯಲ್ಲಿ ಉಲ್ಲೇಖನೀಯ ಸಂಗತಿಗಳು :

## ಸಾವಿರದ ಸಂಚಲನ

ಉಡುಪಿ ಜಿಲ್ಲೆಯ ಬೈಂದೂರಿನಲ್ಲಿ ಜನವರಿ 13 ರಂದು ನಡೆದ ಸಂಚಲನದಲ್ಲಿ ಆ ಕೇಂದ್ರದ ಹತ್ತು ಗ್ರಾಮಗಳಿಂದ ಸಾವಿರದಷ್ಟು ತರುಣರು ಭಾಗವಹಿಸಿದ್ದರು. ಪೂರ್ಣ ಗಣವೇಷಧಾರಿಗಳ ಸಂಖ್ಯೆ 969. ಸಂಭ್ರಮದ ವಾತಾವರಣದಲ್ಲಿ ನಡೆದ ಈ ಸಂಚಲನದಿಂದಾಗಿ ಅಲ್ಲಿನೆಲ್ಲ ಕಾರ್ಯಕರ್ತರ ಉತ್ಸಾಹ ವರ್ಧಿಸಿದೆ.

ಮಂಗಳೂರು ಮಹಾನಗರದ ಸಂಚಲನವನ್ನು ಹೊರತುಪಡಿಸಿದರೆ ಕಳೆದೆರಡು ತಿಂಗಳುಗಳಲ್ಲಿ ಇಡೀ ವಿಭಾಗದಲ್ಲಿ ನಡೆದ ಅತಿ ದೊಡ್ಡ ಸಂಚಲನ ಇದಾಗಿದೆ.

## ಇನ್ನೊಂದೇ ಬಾಕಿ !

ಕಡಬ ತಾಲೂಕಿನ ಕುಟ್ರಪಾಡಿ ಗ್ರಾಮದ ಕೇಪು ಉಪವಸತಿಯಲ್ಲಿರುವ ಹಿಂದು ಮನೆಗಳು 120. ತಮ್ಮ ಉಪವಸತಿಯ ಎಲ್ಲ ಮನೆಗಳೂ ಸಾಂಘಿಕ್‌ಗೆ ಪ್ರತಿನಿಧಿತವಾಗಬೇಕು ಎನ್ನುವ ನಿರ್ಧಾರ ಅಲ್ಲಿಯ ಕಾರ್ಯಕರ್ತರದ್ದು. 5 ಕಾರ್ಯಕರ್ತರು ವಾರವಿಡೀ ಓಡಾಡಿ ಅಷ್ಟೂ ಮನೆಗಳನ್ನು ಸಂಪರ್ಕಿಸಿದರು. ಪರಿಣಾಮ – 119 ಮನೆಯವರು ಗಣವೇಷವನ್ನು ಖರೀದಿಸಿ ಸಾಂಘಿಕ್‌ಗೆ ಹೊರಡುವ ಸಿದ್ಧತೆ ಮಾಡುತ್ತಿದ್ದಾರೆ. ಬಾಕಿ ಉಳಿದಿರುವುದು ಒಂದೇ ಮನೆ ! (ಸಂಪರ್ಕಕ್ಕೆ ಹೋದಾಗ ಆ ಮನೆಯ ಯಜಮಾನರು ಹೊರಹೋಗಿದ್ದರು)

## ಅಶರೀರ ಗಣವೇಷ

ಕುಂದಾಪುರ ತಾಲೂಕಿನ ಕಂಡ್ಲೂರಿನ ಉಪವಸತಿಯೊಂದರ ಸಂಕ್ರಾಂತಿ ಉತ್ಸವದಲ್ಲಿ ಗಣವೇಷ ನಿರೀಕ್ಷಣಾ ಕಾರ್ಯಕ್ರಮವನ್ನು ಯೋಜಿಸಲಾಗಿತ್ತು. ಅವತ್ತು ಎಲ್ಲರೂ ತಮ್ಮ ತಮ್ಮ ಗಣವೇಷ ಧರಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ಸೂಚನೆ ನೀಡಲಾಗಿತ್ತು. ಅಲ್ಲಿನ ಕಾರ್ಯಕರ್ತರ ಪಟ್ಟಿಯಲ್ಲಿದ್ದ ಗಣವೇಷಯುಕ್ತ ತರುಣರು 16. ಉತ್ಸವಕ್ಕೆ 15 ಜನ ಗಣವೇಷ ಧರಿಸಿ ಬಂದಿದ್ದರು. ಉಳಿದ ಒಬ್ಬರು ಹಿಂದಿನ ದಿನ ಕಾರ್ಯ ನಿಮಿತ್ತ ಬೆಂಗಳೂರಿಗೆ ಹೋಗಿದ್ದರು. ಅವರಿಲ್ಲದಿದ್ದರೂ ಅವರ ಗಣವೇಷವು ಕಾರ್ಯಕ್ರಮಕ್ಕೆ ಹಾಜರಾಗಿತ್ತು !

ಅವರು ಬೆಂಗಳೂರಿನಿಂದಲೇ ದೂರವಾಣಿ ಮೂಲಕ ತಮ್ಮ ಪಕ್ಕದ ಮನೆಯ ಬಾಲಕನಿಗೆ ತನ್ನ ಗಣವೇಷವನ್ನು ಉತ್ಸವಕ್ಕೆ ಕೊಂಡೊಯ್ದು ಕಾರ್ಯಕರ್ತರಿಗೆ ತೋರಿಸಲು ತಿಳಿಸಿದ್ದರು. ಅವರು ಸಂಘದ ಸೂಚನೆಯನ್ನು ಪಾಲಿಸಿದರು ; ಬಾಲಕ ಅವರ ಸೂಚನೆಯನ್ನು ಪಾಲಿಸಿದ್ದ !

## ಏಕೋಹಂ ಬಹುಸ್ಯಾಮ

ಕಂಡ್ಲೂರು ಕೇಂದ್ರದ ಸಂಚಲನದಲ್ಲಿ ಪಾಲ್ಗೊಂಡ ಗಣವೇಷಧಾರಿಗಳ ಸಂಖ್ಯೆ 152. ಅದರಲ್ಲಿ 151 ತರುಣರು ಈ ವರ್ಷವೇ ತಮ್ಮ ಗಣವೇಷವನ್ನು ಸಿದ್ಧಮಾಡಿಕೊಂಡವರು. ಉಳಿದೊಬ್ಬ ಹಳಬರು ಬೇರಾರೂ ಅಲ್ಲ – ಅಲ್ಲಿಯ ತಾಲೂಕು ಕಾರ್ಯವಾಹರು ! ಕಳೆದ ವರ್ಷದವರೆಗೆ ಒಬ್ಬರ ಬಳಿ ಮಾತ್ರ ಗಣವೇಷ ಇತ್ತು. ಈವರೆಗೆ 213 ಗಣವೇಷ ಮಾರಾಟವಾಗಿರುವ ವರದಿ ಬಂದಿದೆ.

## ಸಂಘದ ಹುಚ್ಚರು

**ಅವರಿಬ್ಬರೂ ಪುತ್ತೂರು ಜಿಲ್ಲೆಯ ಕಾರ್ಯಕರ್ತರು. ಒಬ್ಬರ ಮಗಳಿಗೆ ಫೆ. 8 ರಂದು ಮದುವೆ. ಇನ್ನೊಬ್ಬರ ತಂಗಿಗೆ ಫೆ. 7ಕ್ಕೆ ಮದುವೆ. (ಫೆ. 3–ನಮ್ಮ ವಿಭಾಗ ಸಾಂಘಿಕ್.) ಇಬ್ಬರೂ ಹೆಣ್ಣಿನ ಮನೆಯವರಾಗಿದ್ದರಿಂದ ಮದುವೆ ತಯಾರಿಯ ಒತ್ತಡವಿರುವುದು ಸಹಜ.**

**ಆದರೆ ಆ ಇಬ್ಬರೂ ದಿನಂಪ್ರತಿ 6–7 ಗಂಟೆಗಳಷ್ಟು ಕಾಲ ಮನೆಮನೆ ಸಂಪರ್ಕ ಮಾಡುತ್ತ ಅಲ್ಲಿ 'ಸಾಂಘಿಕ್–ಗಣವೇಷ' ಎಂದೆಲ್ಲ ಮಾತುಕತೆಯಲ್ಲಿ ಮುಳುಗಿರುವ ಪರಿ ನೋಡಿ ನೆರೆಹೊರೆಯವರಿಗೆಲ್ಲ ಆಶ್ಚರ್ಯ–ಆತಂಕ. ಮನೆಯಲ್ಲಿ ಮದುವೆ ಇರುವುದನ್ನು ಮರೆತಿದ್ದಾರೋ ಎನ್ನುವ ಸಂಶಯ !**

**ಇನ್ನೊಬ್ಬ ತಾಲೂಕು ಕಾರ್ಯವಾಹರು ಕಳೆದ 85 ದಿನಗಳಿಂದ ರಾತ್ರಿ ತಮ್ಮ ಮನೆಯಲ್ಲೇ ಮಲಗಿಲ್ಲ. ತಮ್ಮ ಮನೆ ಬಿಟ್ಟು ಕಾರ್ಯಕ್ಷೇತ್ರದಲ್ಲೇ ವಾಸ್ತವ್ಯ ಮಾಡಿದ್ದಾರೆ.**

**ಆ ಕಾರ್ಯಕರ್ತರ 'ಸಂಘದ ಹುಚ್ಚು' ತಮಗೂ ಹತ್ತಲಿ ಎಂದೇ ಉಳಿದೆಲ್ಲ ಕಾರ್ಯಕರ್ತರ ಬಯಕೆ.**

## ದೃಢ ಸಂಕಲ್ಪ

ಮಲವಂತಿಗೆ ಗ್ರಾಮದ ಎಳನೀರು ಮತ್ತು ನೆರಿಯ ಗ್ರಾಮದ ಬಾಂಜಾರು – ಇವೆರಡೂ ಬೆಳ್ತಂಗಡಿ ತಾಲೂಕಿನ ಉಪವಸತಿಗಳು. ಮೊದಲನೆಯದು ಕುದುರೆಮುಖ ಪರ್ವತದ ಗರ್ಭದಲ್ಲಿದ್ದರೆ ಇನ್ನೊಂದು ಚಾರ್ಮಾಡಿ ಘಾಟಿಯ ಮಡಿಲಲ್ಲಿದೆ. ಎರಡೂ ದುರ್ಗಮ ಪ್ರದೇಶಗಳೇ ! ದಟ್ಟ ಕಾಡಿನಲ್ಲಿ 9 ಕಿ. ಮೀ. ನಷ್ಟು ಕಡಿದಾದ ಪರ್ವತಮಾರ್ಗವನ್ನು ಹತ್ತಿಯೇ ಎಳನೀರನ್ನು ತಲುಪಬೇಕು. ಈ ಮಾರ್ಗದಲ್ಲಿ ಬೈಕ್ ಕೂಡ ಹೋಗಲಾರದು. ವಾಹನದಲ್ಲಿಯೇ ಹೋಗುವುದಾದರೆ ಪಕ್ಕದ ಚಿಕ್ಕಮಗಳೂರು ಜಿಲ್ಲೆಯನ್ನು ಹಾದು ಕಳಸದ ಮೂಲಕ – ಒಟ್ಟಿನಲ್ಲಿ 136 ಕಿ. ಮೀ. ದೂರದ ಬಳಸು ರಸ್ತೆಯನ್ನು ಕ್ರಮಿಸಬೇಕು.

ತಮ್ಮ ತಾಲೂಕಿನ ಎಲ್ಲ ಉಪವಸತಿಗಳನ್ನು ವಿಭಾಗ ಸಾಂಘಿಕ್‌ಗೆ ಪ್ರತಿನಿಧಿಸಲೇಬೇಕು ಎನ್ನುವ ಸಂಕಲ್ಪ ಬೆಳ್ತಂಗಡಿಯ ಕಾರ್ಯಕರ್ತರದ್ದು. ಅವರಿಗೆ ಸವಾಲಾಗಿ ನಿಂತಿದ್ದು ಈ 2 ಉಪವಸತಿಗಳು. ಆದರೆ ಕಟಿಬದ್ಧ ಕಾರ್ಯಕರ್ತರಿಗೆ ಇದಾವ ಲೆಕ್ಕ ? ಆ ಎರಡೂ ಉಪವಸತಿಗಳಿಗೆ ಕಾರ್ಯಕರ್ತರ ತಂಡವೇ ಹೋಯಿತು.

ಎಳನೀರಿನಲ್ಲಿ 30 ತರುಣರ ಬೈಠಕ್ ನಡೆಯಿತು. 7 ಜನ ಗಣವೇಷ ಖರೀದಿಸಿದರು.

ಬಾಂಜಾರಿನಲ್ಲಿ ವನವಾಸಿ ಮಲೆಕುಡಿಯರದೇ ಬಾಹುಳ್ಯ. ಅಲ್ಲೂ ಸುಮಾರು 40 ಜನರ ಬೈಠಕ್ ನಡೆಸಿದ ಕಾರ್ಯಕರ್ತರು 19 ಗಣವೇಷವನ್ನು ಮಾರಾಟ ಮಾಡಿದ್ದಾರೆ.

ಈಗ ಬೆಳ್ತಂಗಡಿ ತಾಲೂಕಿನ ಎಲ್ಲ 138 ಉಪವಸತಿಗಳಲ್ಲೂ ಗಣವೇಷಯುಕ್ತ ತರುಣರು ಸಾಂಘಿಕ್‌ಗೆ ಹೊರಡಲು ಸಿದ್ಧತೆ ನಡೆಸುತ್ತಿದ್ದಾರೆ.

## ತ್ರಿವೇಣಿ ಸಂಚಲನ

ಮುಲ್ಕಿ ತಾಲೂಕಿನಲ್ಲಿ ಒಂದೇ ಸಮಯದಲ್ಲಿ ಮೂರು ಕಡೆಗಳಲ್ಲಿ 3 ಕೇಂದ್ರಗಳ ಸಂಚಲನ ನಡೆಯಿತು. ಸಂಘಕಾರ್ಯದ ದೃಷ್ಟಿಯಿಂದ ಸ್ವಲ್ಪ ದುರ್ಬಲವೆಂದೇ ಪರಿಗಣಿಸಲಾಗುತ್ತಿರುವ ಈ ತಾಲೂಕಿನಲ್ಲಿ ಏಕಕಾಲದಲ್ಲಿ 3 ಸಂಚಲನಗಳು ನಡೆದವು ಎನ್ನುವುದೇ ಆನಂದ–ಅಚ್ಚರಿಗಳ ಸಂಗತಿ.

ಸಂಚಲನದಲ್ಲಿ ಪಾಲ್ಗೊಂಡ ಒಟ್ಟು ಗಣವೇಷಧಾರಿಗಳು 768. (ಕಟೀಲು – 302, ಮುಲ್ಕಿ 298, ಹಳೆಯಂಗಡಿ 168) ತಾಲೂಕಿನಲ್ಲಿ ಈವರೆಗೆ ಸಿದ್ಧವಾದ ಗಣವೇಷಗಳ ಸಂಖ್ಯೆ 1218.

## ಪರಿವರ್ತನೆ ಮೂಡಿಸಿದ ಸಂಚಲನ

1980 ರ ದಶಕ. ಸುಳ್ಯ ತಾಲೂಕಿನ ಮರ್ಕಂಜ ತಾಲೂಕಿನಲ್ಲೇ ಅತೀ ಹೆಚ್ಚು ಮದ್ಯವ್ಯಸನಿಗಳನ್ನು ಹೊಂದಿದ ಗ್ರಾಮವಾಗಿತ್ತು. ಅಲ್ಲಿ 15–20 ಮದ್ಯದಂಗಡಿಗಳು. ನಿತ್ಯ ಮದ್ಯಪಾನಿಗಳದ್ದೇ ಅಶಾಂತಿ. 1989 ರ ಡಾಕ್ಟರ್‌ಜೀ ಜನ್ಮಶತಾಬ್ದಿ ಪ್ರಯುಕ್ತ ಅಲ್ಲೊಂದು ಸಂಚಲನವನ್ನು ಹಮ್ಮಿಕೊಳ್ಳಲಾಗಿತ್ತು. 100 ಮಂದಿ ಗಣವೇಷಧಾರಿಗಳ ಆಕರ್ಷಕ ಪಥಸಂಚಲನ ಗ್ರಾಮದಲ್ಲೇ ಸಂಚಲನ ಮೂಡಿಸಿತು.

ಸಂಘದ ಚಟುವಟಿಕೆ ನಿಧಾನವಾಗಿ ಬೆಳೆಯತೊಡಗಿತು. ಕ್ರಮೇಣ ಮದ್ಯವ್ಯಸನಿಗಳಲ್ಲಿ ಜಾಗೃತಿ ಉಂಟಾಯಿತು. ತಮ್ಮ ಸಂಪಾದನೆಯ ಒಂದು ಭಾಗವನ್ನು ಸಮಾಜಕ್ಕೆ ಮೀಸಲಿಡುವ ಮನೋಭಾವ ಬೆಳೆಯಿತು. ಕ್ರಮೇಣ ಪಾಳುಬಿದ್ದ ಊರಿನ ಮಹಾವಿಷ್ಣು ದೇಗುಲವೂ ಜೀರ್ಣೋದ್ಧಾರಗೊಂಡಿತು. ಜನಜಾಗೃತಿಯೂ ನಡೆದು ಮಾದರಿ ಗ್ರಾಮವಾಗಿ ಬೆಳೆಯತೊಡಗಿತು. ಅದೇ ಗ್ರಾಮದಿಂದ ಇದೀಗ 400 ಕ್ಕೂ ಹೆಚ್ಚು ಜನ ಸಾಂಘಿಕ್‌ನಲ್ಲಿ ಭಾಗವಹಿಸಲಿದ್ದಾರೆ.

## ಜನವರಿ 1 ರಿಂದ 20 ರವರೆಗೆ ವಿಭಾಗದಲ್ಲಿ ನಡೆದ ಸಂಚಲನಗಳ ಮಾಹಿತಿ

**ಈ ತಿಂಗಳ ಸಂಚಲನಗಳು**

| | |
|---|---|
| **ಪುತ್ತೂರು ಜಿಲ್ಲೆ** | |
| ಮರದಾಳ | 79 |
| ಕಲ್ಲುಗುಂಡಿ | 362 |
| ಅರಂತೋಡು | 416 |
| ಬಾಳಿಲ | 58 |
| ಅಲಂಕಾರು | 179 |
| ಉಪ್ಪಿನಂಗಡಿ | 185 |
| ಕಡಬ | 115 |
| ಗುರುವಾಯನಕೆರೆ | 108 |
| ಮುಂಡಾಜೆ | 62 |
| ಕೊಕ್ಕಡ | 112 |
| ನೆರಿಯ | 96 |
| ನಿಡ್ಲೆ | 86 |
| ಉಜಿರೆ (ಕಾ.ವಿ.) | 55 |
| ಪುಣಚ | 225 |
| ಪಡಂಗಡಿ | 73 |
| ಕಲ್ಮಂಜ | 66 |
| ಪೆರಾಜೆ | 44 |
| ನೆತ್ತರಕೆರೆ | 152 |
| ವಗ್ಗ | 62 |
| ಅರಳ | 54 |
| ಬೆಟ್ಟಂಪಾಡಿ | 93 |
| ಕಬಕ | 40 |
| ಸವಣೂರು | 37 |
| ಕಂಚಿಲ | 155 |
| ಸಂಪ್ಯ | 75 |
| ಮುಡಿಪು | 408 |
| ಸಜಿಪ | 155 |
| ಜೋಡುಮಾರ್ಗ | 186 |
| ನೇರಳಕಟ್ಟೆ | 37 |
| ವಾಣಿ | 40 |
| ಶಂಭುಗ | 44 |
| ಕನ್ಯಾನ | |
| **ಉಡುಪಿ ಜಿಲ್ಲೆ** | |
| ಬೈಂದೂರು | 969 |
| ಶಿರೂರು | 302 |
| ಕಂಚಗೋಡು | 182 |
| ಪಡುಬಿದ್ರೆ | 29 |
| ಹಿರಿಯಡ್ಕ | 99 |
| ಕಲ್ಯಾಣಪುರ | 70 |
| ಕೇಶವ ವಸತಿ (ಉಡುಪಿ ನಗರ) | 196 |
| ಕಾರ್ಕಳ | 218 |
| ಹೆಬ್ರಿ | 117 |
| ಬೈಲೂರು | 158 |
| ಆತ್ರಾಡಿ | 101 |
| ನಿಟ್ಟೆ | 102 |
| ಕುಂದಾಪುರ | 70 |
| **ಕೊಡಗು ಜಿಲ್ಲೆ** | |
| ಸೋಮವಾರಪೇಟೆ | 220 |
| ಪೊನ್ನಂಪೇಟೆ | 148 |
| ದೇವರಪುರ | 84 |
| ಕರಿಕೆ ಗ್ರಾಮ | 25 |
| **ಮಂಗಳೂರು ಗ್ರಾಮಾಂತರ** | |
| ಮೂಲ್ಕಿ | 298 |
| ಕಟೀಲು | 302 |
| ಹಳೆಯಂಗಡಿ | 168 |
| ಬೋರಗುಡ್ಡೆ | 69 |
| ಮಂಗಲ್ಪಾಡಿ | 240 |
| ಉಪ್ಪಳ | 288 |
| ವರ್ಕಾಡಿ | 202 |
| ಮೀಂಜ | 86 |
| ಕಾಸರಗೋಡು ನಗರ | 301 |
| ಕುಂಬಳೆ | 145 |
| ಮುಳ್ಳೇರಿಯಾ | 156 |
| ಮಾಡೂರು | 40 |
| ಕುಂಬ್ಡಾಜೆ | 158 |
| ವಾಯಿಪ್ಪಾಡಿ | 169 |
| ವಾವಿನಕಟ್ಟೆ | 39 |
| **ಮಂಗಳೂರು ಮಹಾನಗರ** | |
| ಕದ್ರಿ | 114 |
| ನಾರಾಯಣಗುರು ವಸತಿ (ಸುರತ್ಕಲ್) | 160 |

**ಉಪವಸತಿ ಸಂಚಲನಗಳು : 1 ಉಪವಸತಿ ಸಂಚಲನ :** ಬೂಡಜಾಲು–96, ನೆಟ್ಲ–40, ನ್ಯಾಲ–50, ಕಡೇಶಿವಾಲ್ಯ–22, ಕುಶಾಲನಗರ–93 **2 ಉಪವಸತಿಗಳ ಸಂಚಲನ :** ವೀರಗಂಬ–102, ಪೆರ್ನೆ–22, ಎಲಿಮಲೆ–75, ಕೆರೆಕಾಡು–70. **3 ಉಪವಸತಿಗಳ ಸಂಚಲನ :** ಕಳ್ಳಿಗೆ – 152.

## ಸಾಲುದ್ದದ ಸುದ್ದಿಗಳು

# ಮೂಡುತಲಿದೆ ನವ ವಿಶ್ವಾಸ...

- ಮಂಗಳೂರು ಗ್ರಾಮಾಂತರ ಜಿಲ್ಲೆಯ ಪುತ್ತಿಗೆ ಮಂಡಲದ ಸಣ್ಣ ಗ್ರಾಮ ಮುಗುವಿನಲ್ಲಿ 111 ಜನ ಗಣವೇಷವನ್ನು ಖರೀದಿಸಿದ್ದಾರೆ.
- ಸುರತ್ಕಲ್ ನಗರದ ಸೂರಿಂಜೆ ಉಪವಸತಿಯ ಸಂಕ್ರಾಂತಿ ಉತ್ಸವದಲ್ಲಿ ಪಾಲ್ಗೊಂಡ ಗಣವೇಷಧಾರಿಗಳು 82. ಈಗಾಗಲೇ ಅಲ್ಲಿ 105 ಗಣವೇಷ ಸಿದ್ಧವಾಗಿದೆ.
- ಕುಂದಾಪುರ ತಾಲೂಕಿನ ಸಿದ್ದಾಪುರದಲ್ಲಿ ನಡೆದ ಸಂಚಲನದಲ್ಲಿ ಒಂದೇ ಕುಟುಂಬದ 16 ಜನ ಹೆಜ್ಜೆ ಹಾಕಿದರು.
- ಮಂಜೇಶ್ವರ ತಾಲೂಕಿನ ಘೋಷ್ ಅಭ್ಯಾಸ ವರ್ಗದಲ್ಲಿ ಪಾಲ್ಗೊಂಡ ವಾದಕರ ಸಂಖ್ಯೆ 74.
- ಮುಲ್ಕಿಯಲ್ಲಿ ಮೊದಲ ಬಾರಿಗೆ ಘೋಷ್ ಪಥಕ ರಚನೆಯಾಗಿದೆ. 27 ಪ್ರಗತ ವಾದಕರು ಪಥಕದಲ್ಲಿದ್ದಾರೆ.
- ಉಡುಪಿಯಲ್ಲಿ ಚಿನ್ನ-ಬೆಳ್ಳಿ ಕೆಲಸಗಾರರದ್ದೇ ಪ್ರತ್ಯೇಕ ಬೈಠಕ್ ಡಿಸೆಂಬರ್ 15 ರಂದು ನಡೆಯಿತು. ಒಟ್ಟು 237 ಕುಶಲಕರ್ಮಿಗಳು ಬೈಠಕ್‌ನಲ್ಲಿ ಭಾಗವಹಿಸಿದ್ದರು.
- ಗುರುಪುರ ತಾಲೂಕಿನ ನೀರುಮಾರ್ಗದಲ್ಲಿ ಪಂಜಿನ ಬೆಳಕಿನಲ್ಲಿ ನಡೆದ ಸಂಚಲನದಲ್ಲಿ ಪಾಲ್ಗೊಂಡ ಗಣವೇಷಧಾರಿ ತರುಣರ ಸಂಖ್ಯೆ 362. ಸಂಚಲನದ ಇಕ್ಕೆಲಗಳಲ್ಲಿನ ಪಂಜಿನ ಸಾಲುಗಳಿಂದಾಗಿ ಸಂಚಲನದ ರಂಗೇರಿತು.
- ವಿಭಾಗದ 33 ತಾಲೂಕುಗಳ ಪೈಕಿ 25 ತಾಲೂಕುಗಳ ಎಲ್ಲ ಉಪವಸತಿಗಳಿಂದಲೂ ಗಣವೇಷಧಾರಿಗಳು ಸಾಂಘಿಕ್‌ಗೆ ಬರುವ ಸಿದ್ಧತೆಯಲ್ಲಿದ್ದಾರೆ. ವಿಭಾಗದ ಒಟ್ಟು 3009 ಉಪವಸತಿಗಳಲ್ಲಿ 2827 ಈಗಾಗಲೇ ಗಣವೇಷಯುಕ್ತವಾಗಿವೆ.
- ಕುಂದಾಪುರ ಭಾಗದಲ್ಲಿ ವಿಭಾಗದ ಕೊಟ್ಟ ಕೊನೆಯ ಹಳ್ಳಿ - ನಕ್ಸಲ್ ಪ್ರದೇಶದ ಗ್ರಾಮ - ಹಳ್ಳಿಹೊಳೆಯ ಸಂಕ್ರಾಂತಿ ಉತ್ಸವದಲ್ಲಿ ಪಾಲ್ಗೊಂಡ ಗಣವೇಷಧಾರಿಗಳು 100. ಅದೇ ರೀತಿ ನಕ್ಸಲ್ ಪ್ರದೇಶದ ಇನ್ನೊಂದು ಗ್ರಾಮ ಕಾರ್ಕಳ ತಾಲೂಕಿನ ಈದು 1ನೇ ವಾರ್ಡಿನಲ್ಲಿ ಈವರೆಗೆ 80 ಜನ ಗಣವೇಷ ಸಿದ್ಧಮಾಡಿಕೊಂಡಿದ್ದಾರೆ.
- ಕ್ಯಾಂಪ್ಕೋ ಉದ್ಯೋಗಿಗಳದ್ದೇ ಪ್ರತ್ಯೇಕ ಸಂಚಲನ ಪುತ್ತೂರಿನಲ್ಲಿ ನಡೆಯಿತು. 97 ಜನ ಭಾಗವಹಿಸಿದ್ದರು.
- ಕಾರ್ಕಳ ತಾಲೂಕಿನ ಶಿವಪುರದಲ್ಲಿ ಶಾಖಾ ಮುಖ್ಯ ಶಿಕ್ಷಕ್ ಮತ್ತು ಶಾಖಾ ಟೋಳಿಯ ಕಾರ್ಯಕರ್ತರು (ಎಲ್ಲರೂ ಹೈಸ್ಕೂಲು ವಿದ್ಯಾರ್ಥಿಗಳು) - 52 ಹೊಸ ಗಣವೇಷ ಮಾಡಿದ್ದಾರೆ.
- ಸುಳ್ಯದ ಗುತ್ತಿಗಾರು ಗ್ರಾಮದ ವಳಲಂಬೆ ಉಪವಸತಿಯಲ್ಲಿರುವ ಒಟ್ಟು ಮನೆಗಳು 218. ಅಲ್ಲಿ ಈಗಾಗಲೇ 202 ಮನೆಗಳಿಂದ ಗಣವೇಷ ಸಹಿತ ಸಾಂಘಿಕ್‌ಗೆ ಹೊರಡಲು ಸಿದ್ಧರಾಗಿದ್ದಾರೆ.
- ಸಂಪಾಜೆಯ ಸಂಚಲನದಲ್ಲಿ ಪಾಲ್ಗೊಂಡ 9ರ ವಿದ್ಯಾರ್ಥಿಗೆ ಹುಟ್ಟುವಾಗಲೇ ಒಂದು ಕಾಲು ಗಿಡ್ಡ. ಆದರೆ ಸಂಚಲನದಲ್ಲಿ ಭಾಗವಹಿಸಲೇಬೇಕೆಂಬ ಉತ್ಸಾಹ. ಅದಕ್ಕಾಗಿ 3 ಇಂಚು ಎತ್ತರದ ಬೂಟು ಧರಿಸಿ ಕ್ಲಾಂಪ್ ಸಹಿತ ಸಂಚಲನದಲ್ಲಿ ಹೆಜ್ಜೆ ಹಾಕಿದ.
- ಸುಳ್ಯ ತಾಲೂಕಿನ ಕಲ್ಲುಗುಂಡಿ ಗ್ರಾಮದಿಂದ 130 ಹಾಗೂ ಅರಂತೋಡು ಗ್ರಾಮದಿಂದ 201 ಗಣವೇಷಧಾರಿಗಳು ಸಂಚಲನಗಳಲ್ಲಿ ಪಾಲ್ಗೊಂಡರು.
- ಕುಕ್ಕೆ ಸುಬ್ರಹ್ಮಣ್ಯದಲ್ಲಿನ ಸುಬ್ರಹ್ಮಣ್ಯೇಶ್ವರ ಪ.ಪೂ. ಕಾಲೇಜಿನ 9 ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳು ಪೂರ್ಣಗಣವೇಷ ದೊಂದಿಗೆ ಭಾಗವಹಿಸಲಿದ್ದಾರೆ. ಇದೇ ಶಾಲೆಯ ಕೂಲಿಕಾರ್ಮಿಕರ ಕುಟುಂಬದ 5 ಬಡ ವಿದ್ಯಾರ್ಥಿಗಳಿಗೆ ಅದೇ ತರಗತಿಯ ವಿದ್ಯಾರ್ಥಿನಿಯರು ತಾವೇ ಹಣ ಸಂಗ್ರಹಿಸಿ ಗಣವೇಷ ಹಾಗೂ ಪ್ರಯಾಣ ಖರ್ಚನ್ನು ಭರಿಸುವ ಮೂಲಕ ನೆರವಾಗಿದ್ದಾರೆ.
- ಅದೇ ಕ್ಷೇತ್ರದಲ್ಲಿ ಮತ್ತೊಂದು ಸಂಗತಿಯೂ ಗಮನಾರ್ಹ. ಶಾರೀರಿಕ ವಿಕಲತೆಯಿದ್ದು ಭಿಕ್ಷೆ ಬೇಡಿ ಜೀವನ ಸಾಗಿಸುವವನೋರ್ವ ತನ್ನ ಭಿಕ್ಷೆಯ ಹಣವನ್ನೇ ಸಂಗ್ರಹಿಸಿ ಅದರಲ್ಲಿ ಪೂರ್ಣ ಗಣವೇಷ ಹೊಂದಿಸಿಕೊಂಡಿದ್ದಾನೆ.
- ಮಂಗಳೂರು ಮಹಾನಗರದಲ್ಲಿ 100 ಕ್ಕೂ ಹೆಚ್ಚು ಗಣವೇಷ ಮಾಡಿದ ಉಪವಸತಿಗಳ ಸಂಖ್ಯೆ 39. ಇನ್ನೂ ಕೆಲವು ಉಪವಸತಿಗಳು ಆ ಪಟ್ಟಿಗೆ ಸೇರಲು ದಾಪುಗಾಲು ಹಾಕುತ್ತಿವೆ.
- **ನಿಮಿಷಕ್ಕೊಂದು ಗಣವೇಷ ಮಾರಾಟ :** ಮೂಡಬಿದರೆ ತಾಲೂಕಿನಲ್ಲಿ ತೋಡಾರು ಶಾಖೆಯ ಕಾರ್ಯಕರ್ತರು ಒಂದು ಗಂಟೆ ಯಲ್ಲಿ 67 ಗಣವೇಷವನ್ನು ಮಾರಾಟ ಮಾಡಿದ್ದಾರೆ.
- ಮಂಗಳೂರಿನ ವಿವೇಕ ಶಾಖಾ ಕ್ಷೇತ್ರದ ಉಪೇಕ್ಷಿತ ಕಾಲೊನಿಯ ಕಾರ್ಯಕರ್ತನ ಪ್ರಯತ್ನದಿಂದಾಗಿ ಆತನ ಕುಟುಂಬದ 17 ಜನ ಗಣವೇಷ ಧರಿಸಿ ಸಾಂಘಿಕ್‌ಗೆ ಹೊರಟಿದ್ದಾರೆ.

## ಪಾರ್ಕಿಂಗ್ ವಿವರ

- **ಮಂಗಳೂರು ಮಹಾನಗರ – ಮರವೂರು ಸೇತುವೆ ನಂತರ ಎಡಬಲಗಳ ಪಾರ್ಕಿಂಗ್ ತಾಣಗಳು.**
- **ಕೊಡಗು ಜಿಲ್ಲೆ – ಮರವೂರು ಸೇತುವೆ ನಂತರ ಎಡಭಾಗದಲ್ಲಿ ಪಾಪ್ಯುಲರ್ ಜಗದೀಶ್ ಫಾರ್ಮ್ಸ್**
- **ಕಾವೂರು ಜಂಕ್ಷನ್‌ನಿಂದ ಬರುವ ಉಳಿದೆಲ್ಲಾ ವಾಹನಗಳು – ರೈಲ್ವೇ ಮೇಲ್‌ಸೇತುವೆ ಮುಂಚೆ ಎಡಭಾಗದಲ್ಲಿ ನಾಗಾರ್ಜುನ ಪಾರ್ಕಿಂಗ್ ತಾಣ.**
- **ವಿಟ್ಲ ತಾಲೂಕು – ಬಜ್ಪೆ-ಕೆಂಜಾರು ಮಾರ್ಗದಲ್ಲಿ ಮೈದಾನಕ್ಕೆ ಸ್ವಲ್ಪ ಮುಂಚೆ ಎಡಭಾಗದಲ್ಲಿರುವ ಪಾರ್ಕಿಂಗ್ ತಾಣ.**
- **ಬಜ್ಪೆ ಮಾರ್ಗವಾಗಿ ಬರುವ ಚಿಕ್ಕ ವಾಹನಗಳು (ಕಾರ್, ಜೀಪ್ ಇತ್ಯಾದಿ) ಬಜ್ಪೆ ಪೊರ್ಕೋಡಿ ರಸ್ತೆಯಲ್ಲಿ ಜೋಕಟ್ಟೆಗೆ ಮುಂಚೆ ಎಡಭಾಗದ ರಸ್ತೆಯಲ್ಲಿ ಸಾಗಿ ಸಾಂಘಿಕ್ ಮೈದಾನದಲ್ಲಿ ಪಾರ್ಕಿಂಗ್.**
- **ಬಜ್ಪೆ ಮಾರ್ಗವಾಗಿ ಬರುವ ದೊಡ್ಡ ವಾಹನಗಳು – ಬಜ್ಪೆ-ಕೆಂಜಾರು ರಸ್ತೆಯಲ್ಲಿ ಶ್ರೀದೇವಿ ಭಜನಾ ಮಂದಿರದ ಬಳಿ ಬಲಕ್ಕೆ ತಿರುಗಿ ಸಾಂಘಿಕ್ ಮೈದಾನವನ್ನು ತಲುಪುವುದು.**

# ಭೋಜನ ಕೇಂದ್ರ , ಬರುವ ಮಾರ್ಗ ಮತ್ತು ವಾಹನ ನಿಲುಗಡೆಯ ವಿವರಗಳು

- **ಮಂಗಳೂರು ಮಹಾನಗರ, ಮೂಲ್ಕಿ, ಗುರುಪುರ, ಉಳ್ಳಾಲ ತಾಲೂಕುಗಳ ಸ್ವಯಂಸೇವಕರು ಮತ್ತು ಪೊಳಲಿ ದ್ವಾರದಿಂದ ಮಂಗಳೂರು ಕಡೆಗಿನ ಭಾಗದ ಸ್ವಯಂಸೇವಕರು ತಮ್ಮ ತಮ್ಮ ಮನೆಗಳಲ್ಲೇ ಬೇಗ ಊಟ ಮುಗಿಸಿ ಗಣವೇಷ ಧರಿಸಿ ಹೊರಡಬೇಕು.**
- **ಉಳಿದವರೆಲ್ಲ ಮಧ್ಯಾಹ್ನ 11.45 ಗಂಟೆಗೆ ಭೋಜನಕೇಂದ್ರ ತಲುಪುವಂತೆ ತಮ್ಮ ಸ್ಥಾನದಿಂದ ಹೊರಡಬೇಕು. 2.30 ಗಂಟೆಗೆ ಮೈದಾನ ತಲುಪಬೇಕು.**

| ಜಿಲ್ಲೆ / ತಾಲೂಕು | ಭೋಜನ ಕೇಂದ್ರ | ಕೆಂಜಾರಿಗೆ ಬರಬೇಕಾದ ಮಾರ್ಗ |
|---|---|---|
| ಮಂಗಳೂರು ಮಹಾನಗರ | ತಮ್ಮ ತಮ್ಮ ಮನೆಯಲ್ಲೇ ಊಟ ಮಾಡಿ ಹೊರಡುವುದು | ಕಾವೂರು ಜಂಕ್ಷನ್ ಮೂಲಕ |
| ಕಾಸರಗೋಡು ನಗರ ಮತ್ತು ಕಾಸರಗೋಡು ಗ್ರಾಮಾಂತರ ತಾಲೂಕು ಹಾಗೂ ಮಂಜೇಶ್ವರ ತಾಲೂಕಿನ ಕುಂಬಳೆ ಮತ್ತು ಪುತ್ತಿಗೆ ಭಾಗಗಳು | ಮಾಡ | ಪಂಪ್ ವೆಲ್, ಕೆ.ಪಿ.ಟಿ., ಅಲ್ಲಿಂದ ಬಲಕ್ಕೆ ತಿರುಗಿ ಕಾವೂರು ಜಂಕ್ಷನ್ ಮೂಲಕ |
| ಉಳಿದ ಮಂಜೇಶ್ವರ ತಾಲೂಕು, ತಲಪಾಡಿ, ಕೀನ್ಯ | ಕೊಲ್ಯ ಮಠ | ಪಂಪ್ ವೆಲ್, ಕೆ.ಪಿ.ಟಿ., ಅಲ್ಲಿಂದ ಬಲಕ್ಕೆ ತಿರುಗಿ ಕಾವೂರು ಜಂಕ್ಷನ್ ಮೂಲಕ |
| ಕೊಣಾಜೆ, ದೇರಳಕಟ್ಟೆ, ಕುತ್ತಾರು, ತೊಕ್ಕೊಟ್ಟು, ಉಳ್ಳಾಲ ಪುರಸಭೆ, ಸೋಮೇಶ್ವರ | ತಮ್ಮ ತಮ್ಮ ಮನೆಯಲ್ಲೇ ಊಟ ಮಾಡಿ ಹೊರಡುವುದು | ಪಂಪ್ ವೆಲ್, ಕೆ.ಪಿ.ಟಿ., ಅಲ್ಲಿಂದ ಬಲಕ್ಕೆ ತಿರುಗಿ ಕಾವೂರು ಜಂಕ್ಷನ್ ಮೂಲಕ |
| ಮೂಲ್ಕಿ ತಾಲೂಕು | ತಮ್ಮ ತಮ್ಮ ಮನೆಯಲ್ಲೇ ಊಟ ಮಾಡಿ ಹೊರಡುವುದು | ಕಿನ್ನಿಗೋಳಿ–ಕಟೀಲು–ಬಜ್ಪೆ ಮೂಲಕ |
| ವೇಣೂರು, ಕಾರ್ಕಳ, ಮೂಡಬಿದ್ರೆ, ಬೆಳ್ತಂಗಡಿ | ಮೂಡಬಿದ್ರೆ – ಸ್ವರಾಜ್ ಮೈದಾನ | ಮೂಡಬಿದ್ರೆ–ಕೈಕಂಬ–ಬಜ್ಪೆ ಮೂಲಕ |
| ಗುರುಪುರ ತಾಲೂಕು | ತಮ್ಮ ತಮ್ಮ ಮನೆಯಲ್ಲೇ ಊಟ ಮಾಡಿ ಹೊರಡುವುದು | ಕೈಕಂಬ–ಬಜ್ಪೆ ಮೂಲಕ |
| ಉಡುಪಿ ನಗರ, ಉಡುಪಿ ಗ್ರಾಮಾಂತರ ಮತ್ತು ಕಾಪು ತಾಲೂಕುಗಳು | ಕಾಪು – ಹಳೇ ಮಾರಿಯಮ್ಮ ದೇವಸ್ಥಾನ | ಸುರತ್ಕಲ್–ಕೂಳೂರು–ಅಲ್ಲಿಂದ ಎಡಕ್ಕೆ ತಿರುಗಿ ಕಾವೂರು ಜಂಕ್ಷನ್ ಮೂಲಕ |
| ಬೈಂದೂರು, ಕುಂದಾಪುರ, ಬ್ರಹ್ಮಾವರ ತಾಲೂಕುಗಳು | ಅಂಬಲಪಾಡಿ ದೇವಸ್ಥಾನ | ಸುರತ್ಕಲ್–ಕೂಳೂರು–ಅಲ್ಲಿಂದ ಎಡಕ್ಕೆ ತಿರುಗಿ ಕಾವೂರು ಜಂಕ್ಷನ್ ಮೂಲಕ |
| ಕಡಬ, ಪುತ್ತೂರು ನಗರ, ಪುತ್ತೂರು ಗ್ರಾಮಾಂತರ ತಾಲೂಕುಗಳು ಮತ್ತು ಸುಬ್ರಹ್ಮಣ್ಯ, ಕರಾಯ, ಪೆರ್ಲ ಕೇಂದ್ರಗಳು | ಕಲ್ಲಡ್ಕ – ಶ್ರೀ ರಾಮ ವಿದ್ಯಾ ಕೇಂದ್ರದ ಆವರಣ | ಪಡೀಲ್–ಮರೋಳಿ–ಗುರುಪುರ–ಕೈಕಂಬ–ಬಜ್ಪೆ ಮೂಲಕ |
| ಬಂಟ್ವಾಳ, ವಿಟ್ಲ ತಾಲೂಕು, ಮಡಂತ್ಯಾರು, ಪುಂಜಾಲಕಟ್ಟೆ | ಪೊಳಲಿ ದೇವಸ್ಥಾನ | ಕೈಕಂಬ–ಬಜ್ಪೆ ಮೂಲಕ |
| ಸುಳ್ಯ ತಾಲೂಕು | ಪುತ್ತೂರು – ತೆಂಕಿಲದ ವಿವೇಕಾನಂದ ಹೈಸ್ಕೂಲ್ | ಪಡೀಲ್–ಮರೋಳಿ–ಗುರುಪುರ–ಕೈಕಂಬ–ಬಜ್ಪೆ ಮೂಲಕ |
| ಪೊಳಲಿ ದ್ವಾರದಿಂದ ಮಂಗಳೂರು ಕಡೆಗಿನ ಭಾಗ (ಉದಾ: ನೆತ್ತರಕೆರೆ, ಪರಂಗಿಪೇಟೆ, ತುಂಬೆ) | ತಮ್ಮ ತಮ್ಮ ಮನೆಯಲ್ಲೇ ಊಟ ಮಾಡಿ ಹೊರಡುವುದು | ಪಂಪ್ ವೆಲ್, ಕೆ.ಪಿ.ಟಿ., ಅಲ್ಲಿಂದ ಬಲಕ್ಕೆ ತಿರುಗಿ ಕಾವೂರು ಜಂಕ್ಷನ್ ಮೂಲಕ |
| ಕೊಡಗು ಜಿಲ್ಲೆ | ಪುತ್ತೂರು – ತೆಂಕಿಲದ ವಿವೇಕಾನಂದ ಹೈಸ್ಕೂಲ್ | ಪಂಪ್ ವೆಲ್, ಕೆ.ಪಿ.ಟಿ., ಅಲ್ಲಿಂದ ಬಲಕ್ಕೆ ತಿರುಗಿ ಕಾವೂರು ಜಂಕ್ಷನ್ ಮೂಲಕ |

| ಈ ಬಾರಿ ಎಷ್ಟು? | ವರ್ಷ | ಕಾರ್ಯಕ್ರಮ | ಗಣವೇಷ |
|---|---|---|---|
| | 1983 | ವಿಭಾಗ ತರುಣ ಸಮಾವೇಶ | 13064 |
| | 1992 | ವಿಭಾಗ ತರುಣ ಸಮಾವೇಶ | 31454 |
| | 1995 | ಸಾಮರಸ್ಯ ಸಂಗಮ | 43529 |
| | 2013 ಫೆ.3 | ವಿಭಾಗ ಸಾಂಘಿಕ್ | ? ? ? |

**ಪಾರ್ಕಿಂಗ್ ವಿವರ 3ನೇ ಪುಟದಲ್ಲಿ**

**ವಾಹನದಲ್ಲಿ ಬರುವಾಗ ಸಾಂಘಿಕ್ ಗೀತೆ ಮತ್ತು ಉಪವಿಷ್ಟ ವ್ಯಾಯಾಮಗಳನ್ನು ಅಭ್ಯಾಸ ಮಾಡಿಕೊಂಡು ಬರಬೇಕು.**



ಸಂಪಾದಕರು : ಶ್ರೀ ಗಜಾನನ ಪೈ    ಮುದ್ರಕರು : ದಿಗಂತ ಮುದ್ರಣ, ಮಂಗಳೂರು – 8    ಅಕ್ಷರ ಜೋಡಣೆ : ಅಕ್ಷರೋದ್ಯಮ